
ರತ್ನಜ, ಮೈಸೂರು
ಎಡಗೈಯಲ್ಲಿ ಮೊಬೈಲಿಲ್ಲದೆ ವಾಹನಗಳು ಮುಂದೆ ಹೋಗುತ್ತಲೇ ಇಲ್ಲವಲ್ಲ?



ಟ್ರಾಫಿಕ್ ಪೊಲೀಸಪ್ಪನೂ ಮೊಬೈಲಲ್ಲಿ ನಿರತನಾದ್ದರಿಂದ ಇದಕ್ಕೆ ಅನುಮತಿ ಸಿಕ್ಕಿದೆಯಂತೆ.

ಬಿ. ಬಸವರಾಜ್, ಹರಿಹರ
ಡಾಕ್ಟರ್; ಇದು ಯಾವ ಲಿಂಗ?
ಹಲ್ಲು, ಕೊಳೆತ ಅಂಗ, ಒಂದಷ್ಟು ಕಾಸನ್ನು ಎಳೆದು ತೆಗೆಯುವ pull ಲಿಂಗ.

ಮಲ್ಲಿಕಾರ್ಜುನ, ಸುರಧೇನುಪುರ
ತಂದೆತಾಯಿಯರಿಂದ ಮಕ್ಕಳೋ, ಮಕ್ಕಳಿಂದ ತಂದೆತಾಯಿಯರೋ?
ಮಕ್ಕಳಿಂದ ತಂದೆತಾಯಿಯರು; ಮಕ್ಕಳಿಲ್ಲದಿದ್ದರೆ ಅವರು ಕೇವಲ ಗಂಡು ಹೆಣ್ಣು.

ವಿ. ಹೇಮಂತಕುಮಾರ್, ಬೆಂಗಳೂರು
ನಮ್ಮ ಭೂಮಿಗೆ ಚಂದ್ರನಿಲ್ಲದಿದ್ದರೆ ಏನಾಗುತ್ತಿತ್ತು?



ಹುಣ್ಣಿಮೆಯಂದು ಹುಚ್ಚು ಕೆರಳುವುದು ತಪ್ಪುತ್ತಿತ್ತು.

ಬೂಕನಕೆರೆ ವಿಜೇಂದ್ರ, ಮೈಸೂರು
ಸಜ್ಜನರೇಕೆ ರಾಜಕಾರಣಕ್ಕೆ ಬರುವುದಿಲ್ಲ?
ಹದ್ದುಗಳ ಗುಂಪಿನಲ್ಲಿ ಗುಬ್ಬಿಗಳು ಉಳಿಯಲು ಸಾಧ್ಯವಿಲ್ಲ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಒಳ್ಳೆಯವರನ್ನು ದೇವರು ಬೇಗ ಕರೆಸಿಕೊಳ್ಳುವನಂತೆ. ಹಾಗಾದರೆ ಬದುಕಿರುವವರೆಲ್ಲ ಕೆಟ್ಟವರೆ?
ಒಳ್ಳೆಯವರೂ ಇರುತ್ತಾರೆ; ಕ್ಯೂನಲ್ಲಿ ನೆಕ್ಸ್ಟ್ ಅವರೇ.

ಪಿ. ಜಯವಂತ ಪೈ, ಕುಂದಾಪುರ
ಕೆಲವೆಡೆ ದೇವರಿಗೆ ಮದ್ಯದ ನೈವೇದ್ಯ ನಡೆಯುತ್ತದಂತೆ?
ದೇವನು ಗ'ರಂ' ಆಗದೆ ಕೃಪಾಕಟಾಕ್ಷ 'ಬೀರ'ಲಿ ಎಂದಂತೆ.

ಮಂಚಾಲಿ ನೇಹವರ್ಷಿಣಿ, ಸಂಗನಕಲ್ಲು
ಪಕ್ಷಕ್ಕೂ, ಮತದಾರರಿಗೂ ಎಷ್ಟು ದೂರ?
ಅಲ್ಲವೇ. ಕೊಡುವ ನೋಟು, ಶೀಷೆಗಳ ಈ ಕಡೆ ಪಕ್ಷ, ಆ ಕಡೆ ಮತದಾರ!

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಸಾಯುವುದಕ್ಕೆ ಸ್ಪರ್ಧೆ ಏಕೆ ಇರುವುದಿಲ್ಲ?
ಗೆದ್ದವರು ಟ್ರೋಫಿ ತೆಗೆದುಕೊಳ್ಳಲು ಆಗದಲ್ಲ!

ಸಿ.ಎನ್. ಸೂರ್ಯಪ್ರಕಾಶ್, ಬೆಂಗಳೂರು
ಮಾರುಕಟ್ಟೆಯ ಬೆಲೆಗಳು ಮೇಲೇರುತ್ತಿವೆ. ಜನರ ಹಣ ಕೆಳಗಿಳಿಯುತ್ತಿದೆ. ಇದು ಆರ್ಥಿಕ ಪ್ರಗತಿಯೆ?
ಹೌದು; ನಮ್ಮ ದೇಶದ್ದಲ್ಲ, ವಿದೇಶದ್ದು.

ಉಷಾಲಕ್ಷ್ಮಿ ಅರವಿಂದಹೊಳ್ಳ, ಬೆಂಗಳೂರು
ಬೇವಿನಲ್ಲಿ ಮಾವಿನ ಸಿಹಿ ತರಲು ಸಾಧ್ಯವೆ?
ಹೂಂ. ಬೇವಿನೆಲೆಗಳನ್ನು ಹರವಿ ಜೋಡಿಸಿ ಸೀಕರಣೆಯನ್ನು ಬಡಿಸಿ.

ಅ. ಮೃತ್ಯುಂಜಯ, ಪಾಂಡವಪುರ
ಪಾಪ, ಪುಣ್ಯ ಯಾವುವು?
ಗರ್ಭದಲ್ಲಿರುವುದು ಪಾಪ. ಅದು ಅಬಾರ್ಷನ್ ಮಾಡಿಸಿಕೊಳ್ಳದೆ ಉಳಿದರೆ ಪುಣ್ಯ.

ಎಸ್.ಸಿ. ರಮೇಶ್, ಮೈಸೂರು
ಕಾಲಪ್ರಜ್ಞೆ ಇಲ್ಲದ ರಾಜಕಾರಣಿಗಳು ವೇದಿಕೆಗಳಲ್ಲಿ ಆಗಾಗ್ಗೆ ವಾಚ್ ನೋಡಿಕೊಳ್ಳುವುದೇಕೆ?
'ಟೈಂ ನೋಡಲು ತಿಳಿದವನು ಕಾಲಜ್ಞಾನಿ' ಎಂದು ಯಾರೋ ಹೇಳಿರಬೇಕು!

ಉದಯ ಸಿದ್ರಾಯ ಕಾಕತಿ, ಬೆಳಗಾವಿ
ಅಂದು ಸತ್ಯಮೇವ ಜಯತೆ. ಇಂದು ಸತ್ತಮೇಲೆ ಜಯತೆ. ಮುಂದೆ?
ಸತ್ತವನ ಆಸ್ತಿ ಕಬಳಿಸಿದ ಮೇಲೆ ಜಯತೆ.

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ
ಗೂಡಂಗಡಿ ಪ್ರಾರಂಭಿಸಲೂ ಲೈಸೆನ್ಸ್ ಬೇಕು. ಮಠ, ಮಂದಿರ ಆರಂಭಿಸಲು ಏಕಿಲ್ಲ?
ಇದೆಯಲ್ಲ! ಪುನರ್ಜನ್ಮ, ಕುಂಭೀಪಾಕ ಎಂದೆಲ್ಲ ನಂಬಿಸುವ lie sense ಅಲ್ಲಿ ಅತ್ಯವಶ್ಯ.

ಮಂಜಪ್ಪ ಎಚ್, ಸಂತೇಬೆನ್ನೂರು
'ರಾತ್ರಿ' ಎಂಬುದು ಯಾರಿಗೆ ಸುಖ? ಯಾರಿಗೆ ದುಃಖ?
ಅದು ನವರಾತ್ರಿ ಆದವರಿಗೆ ಸುಖ; ಒಣರಾತ್ರಿ ಆದವರಿಗೆ ದುಃಖ.

ಸುಧೀಂದ್ರ, ಬೆಂಗಳೂರು
ಶಿವಮಂದಿರದ ಎದುರಿನ ನಂದಿಯ ಕಿವಿಯಲ್ಲಿ ನನ್ನವಳು ಏನನ್ನು ಪಿಸುಗುಡುತ್ತಿರಬಹುದು?
'ನಿನಗೆ ಒಂದೇ ಜಾಗರಣೆ; ನನಗೆ ನನ್ನವರ ಗೊರಕೆಯಿಂದ ನಿತ್ಯ ಜಾಗರಣೆ' ಎಂಬ ದೂರಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹಾಸಿಗೆ ಇದ್ದಷ್ಟು ಕಾಲು ಚಾಚು; ನಾಲಿಗೆ ಇದ್ದಷ್ಟು?



'ಬ್ರೇಕಿಂಗ್ ನ್ಯೂಸ್ ಒದರು' ಎಂದನಾ ವಾಹಿನಿಗ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ತಂದೆಯ ಆಸ್ತಿಯಲ್ಲಿ ಪಾಲು ಕೇಳುವ ಸೋದರಿ ಅವರು ಮಾಡಿದ ಸಾಲದಲ್ಲಿ ಪಾಲು ಕೇಳಳಲ್ಲ?
ಆ ಬಾಬ್ತನ್ನು ಬಡ್ಡಿಸಹಿತ ಮುರಿದೇ ನೀವು ಪಾಲು ಕೊಡುವಿರೆಂದು ಗೊತ್ತಂತೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಮಹಿಳೆ: ಇಳೆ, ಮಡದಿ, ಮಮತೆ, ಮನ್ನಿಸುವಿಕೆ. ಹೇಗಿದೆ ನನ್ನ ವ್ಯಾಖ್ಯಾನ?
ಪರಿಭ್ರಮಣ, ಗ್ರಹಣ, ಕಂಪನಗಳನ್ನು ಬಿಟ್ಟಿರಲ್ಲ!

■ ರಾಮ್